ಕರ್ನಾಟಕ ಸರ್ಕಾರ

# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ/ಕಂ/ಅಪೀಲು/366/12-13 ದಿನಾಂಕ : 30/08/2016.

ಉಪಸ್ಥಿತರು: **ಲೋಕೇಶ್ ಪಿ. ಎನ್,** ಕ. ಆ. ಸೇ.

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಎ ಚನ್ನಬಸಪ್ಪ ತಂದೆ ಮರಿಸ್ವಾಮಪ್ಪ, ಕಾಟಿನಕಂಭ ಗ್ರಾಮ, ನಿಡಗುರ್ತಿ ಅಂಚೆ, ಸಂಡೂರು ತಾಲ್ಲೂಕು<br><br>(ಶ್ರೀ ಜಿ ನೀಲನಗೌಡ ., ವಕೀಲರು, ಬಳ್ಳಾರಿ) | 1. ಪೂಜಾರಿ ಗುರುವಯ್ಯ ತಂದೆ ಓಬಯ್ಯ ವರ ವಾರಸರು ಪೂಜಾರಿ ನರಸಿಂಹಪ್ಪ ತಂದೆ ಗುರುವಯ್ಯ, ಕಾಟಿನಕಂಭ ಗ್ರಾಮ, ನಿಡಗುರ್ತಿ ಅಂಚೆ, ಸಂಡೂರು ತಾಲ್ಲೂಕು<br>2. ತಹಶೀಲ್ದಾರರು, ಸಂಡೂರು<br>3. ಕಂದಾಯ ನಿರೀಕ್ಷಕರು, ಚೋರನೂರು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸಂ. ನಂ. | ವಿಸ್ತೀರ್ಣ |
|---|---|---|---|
| ಸಂಡೂರು | ನಿಡಗುರ್ತಿ | ಪೈಕಿ 391 | 3.00 |

ವಾದಿಯು ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿ ಆರ್ ಟಿ ಆರ್ 1273/48-49 ರ ಪ್ರಕಾರ ಪಹಣಿಯಲ್ಲಿ ನಮೂದಿಸಲು ಕೋರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ 04/12/2012, 23/07/2013, 20/12/2013, 28/07/2015, 17/05/2016, 20/05/2016 ಮತ್ತು 30/08/2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಯಿತು.

ವಾದಿಗಳು ಈ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿ, ತನ್ನ ತಂದೆಯು 1947 ರಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಪ್ರಸ್ತಾಪಿತ ಜಮೀನನ್ನು ಶ್ರೀ ಗೋರವಯ್ಯ ತಂದೆ ಪೂಜಾರ್ ಓಬಯ್ಯ ಇವರಿಂದ ಖರೀದಿಸಿದ್ದು, 1965 ರಿಂದ 1986-87 ರವರೆಗಿನ ಪಹಣಿಗಳಲ್ಲಿ ತನ್ನ ತಂದೆಯ ಹೆಸರು ನಮೂದಾಗಿದ್ದು, ತದನಂತರ ಪಹಣಿಯಿಂದ ತನ್ನ ತಂದೆಯ ಹೆಸರನ್ನು ಯಾವುದೇ ನೋಟೀಸು ನೀಡದೇ ಪಹಣಿ ಕಾಲಂ 12 ಮತ್ತು 12(2) ರಿಂದ ತೆಗೆದು ಹಾಕಲಾಗಿರುತ್ತದೆ ಎಂದು ತಿಳಿಸುತ್ತಾ, ತನ್ನ ತಂದೆಯು 1993-94 ರಲ್ಲಿ ಮರಣ ಹೊಂದಿದ್ದು, ಆರ್ ಟಿ ಆರ್ ಸಂಖ್ಯೆ 1296/1948-49 ರಲ್ಲಿಯೂ ತನ್ನ ತಂದೆಯ ಹೆಸರಿಗೆ ಹಕ್ಕು ಉಂಟಾಗಿದ್ದು, ಪ್ರತಿವಾದಿ 1 ಮತ್ತು 2 ರವರು ಈ ಮೇಲಿನ ಅಂಶಗಳನ್ನು ಗಮನಿಸದೇ, ಪಹಣಿಯಿಂದ ತೆಗೆದು ಹಾಕಲಾಗಿರುತ್ತದೆ ಎಂದು ತಿಳಿಸುತ್ತಾ, ಸಂಡೂರು ತಾಲ್ಲೂಕು ನಿಡಗುರ್ತಿ ಸ. ನಂ. 391ಪೈಕಿ ವಿಸ್ತೀರ್ಣ 3.00 ಎಕರೆ ಜಮೀನಿಗೆ ವಾದಿಯ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಮತ್ತು ಪಹಣಿಯಲ್ಲಿ ನಮೂದಿಸಲು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿ 1 ರವರಿಗೆ ಹಲವು ಬಾರಿ ನೋಟೀಸು ನೀಡಿದಾಗ್ಯೂ, ನಿರಂತರವಾಗಿ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದ ವಾದಿಯ ಮೇಲ್ಮನವಿ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, 1968-69 ರಿಂದ 1986 ವರೆಗಿನ ಪಹಣಿಗಳಲ್ಲಿ ವಾದಿಯ ತಂದೆಯ ಹೆಸರು ಪಹಣಿಯಲ್ಲಿ ನಮೂದಾಗಿದ್ದು, ತದನಂತರ ಕಡಿಮೆಯಾಗಿರುವುದು ಕಂಡುಬರುತ್ತದೆ. ಸದರಿ ನಮೂದನೆಯನ್ನು ಪುನರಸ್ಥಾಪಿಸಲು ವಾದಿಯು ಕೋರಿರುತ್ತಾರೆ. ಸದರಿ ಜಮೀನಿನ ಸರ್ವೆ ಮಾಡಿಸಲಾಗಿದ್ದು, ತಹಶೀಲ್ದಾರರು, ಸಂಡೂರು ಇವರು ಸರ್ವೆಗೆ ಸಂಬಂಧಿಸಿದ ನಕ್ಷೆಯನ್ನು ದೃಢೀಕರಿಸಿದ್ದು, ಸರ್ವೆ ವರದಿಯಲ್ಲಿ ವಾದಿಗೆ ವಿಸ್ತೀರ್ಣ 3.00 ಎಕರೆ ಅನುಭವ ಹೊಂದಿರುವ ಬಗ್ಗೆ ನಕ್ಷೆಯಿಂದ ತಿಳಿದು ಬಂದಿರುತ್ತದೆ. ಪ್ರತಿವಾದಿ 1 ರವರ ಹೆಸರನ್ನು ಯಾವುದೇ ಹಕ್ಕು ದಾಖಲೆ ಇಲ್ಲದೆ ಪಹಣಿಯಲ್ಲಿ ನಮೂದಿಸುವ ಪೂರ್ವದಲ್ಲಿ ವಾದಿಯ ಹೆಸರನ್ನು 1986-87 ರಿಂದ ಪಹಣಿಯಲ್ಲಿ ಏಕೆ ಕಡಿಮೆ ಮಾಡಲಾಯಿತು ಎನ್ನುವ ಕುರಿತು ಸದರಿ ಜಮೀನಿನ ಎಲ್ಲಾ ಹಿತಾಸಕ್ತದಾರರಿಗೂ ನೋಟೀಸು ಜಾರಿಗೊಳಿಸಿ ಮೂಲ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸ್ಥಳ ತನಿಖೆ ಮಾಡಿ, ನಿಯಮಾನುಸಾರ ಕ್ರಮವಹಿಸಲು, ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸುವ ಈ ಕೆಳಕಂಡ ಆದೇಶ.

......2

## ಆದೇಶ

**ವಾದಿಯ ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ ಮತ್ತು ಕಾರಣಗಳಿಗಾಗಿ, ಸಂಡೂರು ತಾಲ್ಲೂಕು ನಿಡಗುರ್ತಿ ಸ. ನಂ. ಪೈಕಿ 391 ವಿಸ್ತೀರ್ಣ 3.00 ಎಕರೆ ಜಮೀನಿಗೆ ಎಲ್ಲಾ ಹಿತಾಸಕ್ತದಾರರಿಗೂ ನೋಟೀಸು ಜಾರಿಗೊಳಿಸಿ ಮೂಲ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸ್ಥಳ ತನಿಖೆ ಮಾಡಿ, ನಿಯಮಾನುಸಾರ ಕ್ರಮವಹಿಸಲು ತಹಶೀಲ್ದಾರರು, ಸಂಡೂರು ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 30/08/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ತಹಶೀಲ್ದಾರರು, ಸಂಡೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.